**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

# ಕ್ರಿಮಿನಲ್ ಪ್ರಕರಣ ಸಂಖ್ಯೆ : 621/ 2021

ಪಿರ್ಯಾದುದಾರರು : ಕುದೂರು ಪೋಲಿಸ್‌ಠಾಣೆ

**ವಿರುದ್ಧ**

**ಆರೋಪಿಗಳು : ಶಿವಾನಂದಾ**

**ಚಾಸಾ :- 05 / ಪ್ರಾಸಾ :- 02**

| | |
|---|---|
| ಹೆಸರು | **ಕೆ. ಟಿ. ವೆಂಕಟೇಶ್** |
| ತಂದೆಯ / ಗಂಡನ ಹೆಸರು | **ತಿಮ್ಮಯ್ಯ,** |
| ವಯಸ್ಸು | **51** |
| ಉದ್ಯೋಗ | **ವ್ಯಾಪಾರ** |
| ವಿಳಾಸ | **ಕುದೂರು** |

**ದಿನಾಂಕ: 07-11-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ 4 , 6 ರಿಂದ 18 ರವರು ಗೊತ್ತು. ದಿ.21-09-2019 ರಂದು ಕುದೂರು ಗ್ರಾಮ ಪಂಚಾಯಿತಿಯ 2018 ಮತ್ತು 19ನೇ ಸಾಲಿನ ಜಮಾಬಂಧಿ ಕಾರ್ಯಕ್ರಮ ಗ್ರಾಮ ಪಂಚಾಯಿತಿಗೆ ಸೇರಿದ ರಾಜೀವ ಸೇವಾ ಕೇಂದ್ರ ಕಟ್ಟಡದಲ್ಲಿ ಮಾನ್ಯ ಜಮಾಬಂಧಿ ಕಾರ್ಯ ಕ್ರಮದ ಉಮೇಶ್ ಚಾಸಾ-4ರವರು ಅದ್ಯಕ್ಷತೆಯಲ್ಲಿ ನಡೆಯುತ್ತಿದ್ದು, ಸದರಿ ಕಾರ್ಯಕ್ರಮ 11.30ಕ್ಕೆ ಪ್ರಾರಂಭವಾಗಿದ್ದು, ಸುಮಾರು 1 ಗಂಟೆ ಸಮಯಕ್ಕೆ ಜಮಾಬಂಧಿ ಕಾರ್ಯಕ್ರಮವು ನಡೆಯುತ್ತಿದ್ದಾಗ, ಆರೋಪಿಯು ಆ ಸಮಯಕ್ಕೆ ಬಂದು ನೂಕಾಟವಾಗಿ ಗಲಾಟೆ ಪ್ರಾರಂಭವಾಯಿತು. ಆ ಸಮಯಕ್ಕೆ ಚಾಸಾ-1ರಿಂದ 4, 6 ರಿಂದ 9 ಇತರೇ ಸಾರ್ವಜನಿಕರು ಸೇರಿದ್ದರು. ಮಾತಿಗೆ ಮಾತು ಬೆಳೆದು ಆರೋಪಿಯು ನನ್ನ

ತಲೆಗೆ ಭಾಗಕ್ಕೆ ತಮ್ಮ ಕೈಯಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಜಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿ.21-09-2019 ರಂದು ಲೆಕ್ಕ ತಪಾಸಣೆಗೆ ಸಂಬಂಧಿಸಿದಂತೆ ಜಮಾಬಂಧಿ ಕಾರ್ಯಕ್ರಮ ನಡೆಸಲು ಪ್ರಕಟಣೆ ಹೊರಡಿಸಿದ್ದೆವು ಎಂದರೆ ಸರಿ. ಆ ದಿನ ಆರೋಪಿಯು ಏಕಾಏಕಿ ಬಂದು ನಿಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಂತರ ಆರೋಪಿ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿ ಟೇಬಲ್ ಮೇಲೆ ಇದ್ದ ದಾಖಲಾತಿಗಳನ್ನು ಹರಿದು ಹಾಕಿರುತ್ತಾರೆ ಎಂದರೆ ನಾನು ಆ ಸಮಯಕ್ಕೆ ಹೊರಗಡೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಟೇಬಲ್ ನ ಮೇಲೆ ಹಾಜರುಪಡಿಸಿದ್ದ ದಾಖಲಾತಿಗಳನ್ನು ಆರೋಪಿಯು ಆ ದಿನ ಹರಿದು ಹಾಕಿದ್ದನ್ನು ನೋಡಿರುತ್ತೇನೇ ಎಂದರೆ ಸರಿಯಲ್ಲ. ದಾಖಲಾತಿಗಳನುನ ಹಾರಿದು ಹಾಕಿದ ವಿಚಾರ ಎಲ್ಲಾ ನಿಮಗೆ ತಿಳಿದಿದ್ದರೂ ಸಹ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಸಿ.ಡಿ. ಪಿ ವಕೀಲರಿಂದಃ**

ಆ ದಿನ ಜಮಾ ಬಂಧಿ ಕಾರ್ಯಕ್ರಮದಲ್ಲಿ ಸು ಮಾರು 90 ರಿಂದ 100 ಜನ ಇದ್ದರು. ಜಮಾ ಬಂಧಿ ಕಾರ್ಯಕ್ರಮ 11.30 ರಿಂದ 1.00 ಗಂಟೆಯ ಸಮಯದವರೆಗೂ ನಡೆದಿರುತ್ತದೆ. 11.30 ರಿಂದ 1.00 ಗಂಟೆಯವರಗೂ ಜಮಾಬಂಧಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆ ನಡೆದಿಲ್ಲ ಎಂದರೆ ಸರಿಯಲ್ಲ. ಜಮಾಬಂಧಿ

ಕಾರ್ಯಕ್ರಮದಲ್ಲಿ ಆಯಾ ಮತ್ತು ವ್ಯಯಾ ವಿಚಾರದ ಬಗ್ಗೆ ಚರ್ಚೆ ನಡೆದಿರುತ್ತದೆ. ಜಮಾ ಬಂಧಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು 80 ಜನರು ಇರುತ್ತಾರೆ. ಅಲ್ಲಿ ನೆರೆದಿರುವ 80 ಜನರ ಸಾರ್ವಜನಿಕರ ಹೆಸರು ಹೇಳಲು ಬರುವುದಿಲ್ಲ. ಆರೋಪಿಯು ಆ ದಿನ ಖರ್ಚು ವೆಚ್ಚದ ವಿಷಯದ ಬಗ್ಗೆ ಗಲಾಟೆ ಮಾಡಲು ಬಂದಿರುತ್ತಾರೆ. ಜಮಾಬಂಧಿ ಕಾರ್ಯಕ್ರಮದಲ್ಲಿ ಆರೋಪಿಯ ಯಾವುದೇ ವೈಯಕ್ತಿಕ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿ. ಆರೋಪಿಯು ನನಗೆ 30 ವರ್ಷಗಳಿಂದ ಗೊತ್ತು. ನಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆರೋಪಿಗೂ ಸಹ ಒಂದು ಅಂಗಡಿಯನ್ನು ಬಾಡಿಗೆಗೆ ನೀಡಿರುತ್ತೇವೆ ಎಂದರೆ ಸರಿ. ಆರೋಪಿಯು ಚಿನ್ನ ಬೆಳ್ಳಿ ಅಂಗಡಿಯನ್ನು ನಡೆಸಲು ಬಾಡಿಗೆಗೆ ನೀಡಿರುತ್ತೇವೆ. ಸುಮಾರು 10 ವರ್ಷಗಳಿಂದ ಅಲ್ಲಿ ಬಾಡಿಗೆಗೆ ಇರುತ್ತಾರೆ. ಜಮಾಬಂಧಿ ಕಾರ್ಯಕ್ರಮಕ್ಕೂ ಮುಂಚೆ ಅಂಗಡಿ ಮಳಿಗೆಗಳ ಮುಂಗಡ ಹಣ ಮತ್ತು ಬಾಡಿಗೆ ವಿಚಾರವಾಗಿ ಮಾತುಕತೆ ನಡೆದಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ಸಹ ಇದ್ದೆನು ಎಂದರೆ ಸರಿ. ಆ ಮುಂಗಡ ಹಣ 75 ಸಾವಿರ ಇದ್ದು ಬಾಡಿಗೆ 35 ಸಾವಿರ ಇದ್ದು ಅದನ್ನು ಮುಂಗಡ ಹಣ 1 ಲಕ್ಷ ಮತ್ತು ಬಾಡಿಗೆಯನ್ನು 4300 ರೂ ಕೊಡಬೇಕೆಂದು ಮಾತುಕತೆ ಆಗಿರುತ್ತದೆ. ಆದ್ದರಿಂದ ನಿಮಗೂ ಮತ್ತು ಅರೋಪಿಗೂ ವೈಮನಸ್ಸು ಆಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಗೂ ಮತ್ತು ಇಂದಿನ ಅಧ್ಯಕ್ಷರಿಗೂ ಆಗಿರುತ್ತದೆ. ನಾನು ಆಗ ಸದಸ್ಯನಾಗಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯು ಆ ವಿಚಾರಕ್ಕೆ ಸಂಬಂದಧಿಸಿದಂತೆ ದಾವೆಯನ್ನು ಸಹ ಹೂಡಿರುತ್ತಾರೆ ಎಂದರೆ ಸರಿ. ಅದ್ದರಿಂದ ನಿಮಗೂ ಮತ್ತು ಪಂಚಾಯಿತಿ ಅಧಿಕಾರಿಗಳಿಗೂ ಮತ್ತು ಆರೋಪಿಗಳಿಗೂ ಯಾವುದೇ ಮಾತುಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿಯು ಅಲ್ಲಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದು ಸಾರ್ಜನಿಕರ ಕಾರ್ಯಕ್ರಮವಾಗಿದ್ದರಿಂದ ಅದನ್ನು ವಿಡಿಯೋ ಮಾಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿ ಸಿಸಿ ಕ್ಯಾಮರಾ ಅಳವಡಿಸಿದ್ದೀರಾ ಎಂದರೆ ಪಂಚಾಯಿತಿ ಕಛೇರಿಯಲ್ಲಿ ಇರುತ್ತದೆ

ಆದರೆ ಜಮಾಬಂಧಿ ಕಾರ್ಯಕ್ರಮ ನಡೆಸುವ ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೂ ನನಗೂ ಯಾವುದೇ ವೈಯಕ್ತಿಕ ದ್ವೇಷವಿರಲ್ಲಿ ಎಂದರೆ ಸರಿ. ಅಷ್ಟು ಜನರು ಇದ್ದು ಅವರೊಬ್ಬರೇ ಬಂದು ನಿಮಗೆ ಏಕಾಏಕಿ ಒಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆಗುವವಷ್ಟರಲ್ಲಿ ಜಮಾಬಂಧಿ ಕಾರ್ಯಕ್ರಮ ಮುಗಿದಿತ್ತು ಎಂದರೆ ಸರಿ. ನಿಮಗೆ ಆರೋಪಿ ಒಡೆದಿದ್ದರಿಂದ ನಿಮಗೆ ರಕ್ತಗಾಯವಾಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದೈಹಿಕವಾಗಿ ನಿಮಗೆ ಏನಾದರೂ ನೋವುಂಟಾಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ಸಂಬಂಧಪಟ್ಟಂತೆ ನೀವು ಆಸ್ಪತ್ರೆಗೆ ದಾಖಲಾಗಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮನ್ನು ದೈಹಿಕವಾಗಿ ಹಲ್ಲೆ ಮಾಡಿಲ್ಲ , ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ. ಆರೋಪಿಯ ಅಂಗಡಿಯ ಮುಂಗಡ ಹಣ ಮತ್ತು ಬಾಡಿಗೆಯನ್ನು ಹೆಚ್ಚು ಮಾಡಲು ನಿಮಗೂ ಮತ್ತು ಆರೋಪಿಗೆ ವೈಮನಸ್ಸು ಇದ್ದರಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅಧಿಕಾರಿ ಅವಧಿಯಲ್ಲಿ ಪಿ.ಡಿಓ ಅವರು ನೀಡಿದ ದೂರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಜಮಾಬಂಧಿ ಕಾರ್ಯಕ್ರಮಕ್ಕೆ ಆರೋಪಿ ಬಂದಿರಲೇ ಇಲ್ಲ ನೀವು ಸುಳುಳ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ದಿನ ಆರೋಪಿಯು ಜಮಾಬಂಧಿ ಗೆ ಬಂದಿದ್ದರು ಎಂದು ಯಾವುದಾದರೂ ದಾಖಲಾತಿ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯು ಪ್ರತ್ಯೇಕ ಸಾಕ್ಷಿಗಳು ಇದ್ದರು ಎಂದು ನುಡಿಯುತ್ತಾರೆ. ನೀವು ಹೇಳುತ್ತಿರುವ ಪ್ರತ್ಯೇಕ್ಷ ಸಾಕ್ಷಿಗಳು ನಿಮ್ಮ ಕೈಕೆಳಗಿನ ಸಿಬ್ಬಂದಿಗಳು ಮತ್ತು ನಿಮ್ಮ ಜೊತೆ ಕೆಲಸ ಮಾಡುವ ಅಧಿಕಾರಿಗಳು ಎಂದರೆ ಸರಿ.

**ಮರು ವಿಚಾರಣೆ :- ಇರುವುದಿಲ್ಲ.**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**

ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.